ಶ್ರೀ. ಅಪ್ಪಣ್ಣಗೌಡಾ ಪಾಟೀಲ ಸಂಕೇಶ್ವರ ಇವರ ಸಲುವಾಗಿ ಅವರ ಸಂಬಂಧಿಕ ರಾದ ಶೆಟಗೌಡಾ ಬಾಬಾಗೌಡಾ ಪಾಟೀಲ ಕಮತ್ಯಾನ ಹಟ್ಟಿ (ಚಿಕ್ಕೋಡಿ) ಇವರನ್ನು ಪೋಲೀಸರು ಬಹಳ ಬಡೆದರು. ಬಡೆತದ ಕಚ್ಚುಗಳು ಈಗಲೂ ಅವರ ಮೈಮೇಲೆ ಉಳಿದಿವೆ. ಅಪ್ಪಣ್ಣಗೌಡರ ಮನೆಯಲ್ಲಿಯ ದನಕರುಗಳನ್ನು ಆಸ್ತಿ ಪಾಸ್ತಿಯನ್ನು ಜಪ ಮಾಡಿ ಅವರ ಮಗನನ್ನು ಜೇಲಿಗೆ ಹಾಕಿದರು.

ಶ್ರೀ. ವೀರಪ್ಪ ಸುತಗಟ್ಟಿಯವರು ಪೋಲೀಸರ ಕೈಯೊಳಗಿಂದ ಪಾರಾಗಿ ಹೋಗುವಾಗ ಅವರಿಗೆ ಗುಂಡು ಹಾಕಿದರು. ಗುಂಡು ಬಲಗೈ ತೋಳಿಗೆ ತರಿದು ಹೋಗಿ ಮರಣಾಂತಿಕ ಗಾಯವಾಯಿತು. ಸುದೈವದಿಂದ ಆದರೊಳಗಿಂದ ಅವರು ಚೇತರಿಸಿ ಕೊಂಡರು.

ಜೀವಂತ ನರಕವಾಸ !

ಪೋಲೀಸರಿಂದ ದೈಹಿಕವಾಗಿ ಹೊಡೆತ ಬಡೆತ ತಿಂದು ಬಂದರೆ ಯಮಯಾತನೆ ತೀರುತ್ತಿದ್ದಿಲ್ಲ. ಲಾಕಪ್ಪುಗಳಲ್ಲಿ ಕುರಿಗಳಂತೆ ನಮ್ಮ ಕಾರ್ಯಕರ್ತರನ್ನು ತುಂಬಿ ಅವರಿಗೆ ಬೆಳಕು ಗಾಳಿ ನೀರು ಸಹ ಸರಿಯಾಗಿ ಸಿಗದಂತೆ ಮಾಡಿದರು. ದಿನದಲ್ಲಿ ಎರಡು ಸಾರೆ ಮುಂಜಾನೆ ಒಮ್ಮೆ ಸಂಜೆಗೆ ಒಮ್ಮೆ ಹೀಗೆ ಅದೂ ೧೫ ನಿಮಿಷ ಮಾತ್ರ ಹೊರೆಗೆ ಬಹಿರ್ದಿಶೆಗೆ ಮಲಮೂತ್ರ ವಿಸರ್ಜನೆಗೆ ಬಿಡುತ್ತಿದ್ದರು. ಇಬ್ಬರ ಕೈಗೆ ಬೇಡಿ ಹಾಕಿ ಸಾಲು ಸಾಲಾಗಿ ಶೌಚಕ್ಕೆ ಕೂಡಿಸುತ್ತಿದ್ದರು. ಸ್ನಾನಕ್ಕೆ ನೀರಿಲ್ಲ, ಆರಿವೆ ಒಗೆದು ಕೊಳ್ಳುವ ದಂತೂ ಸಾಧ್ಯವೇ ಇಲ್ಲ. ಮೈಮೇಲೆ ಕೂರಿಗಳು ಹರಿದಾಡುತ್ತಿದ್ದವು, ತಗಣಿ ಗುಂಗಾಡು ಗಳೂ ಚಿಕ್ಕಾಡುಗಳೂ ಒಂದೇ ಸವನೆ ಕಾಡುತ್ತ ನಿದ್ರೆಯನ್ನೇ ಇಲ್ಲದಂತೆ ಮಾಡಿದ್ದವು. ಹಗಲು ಮತ್ತು ರಾತ್ರಿ ೭ಳ ಗಂಟೆ ವನ್ನ ಪಶುಗಳನ್ನಿಟ್ಟಂತೆ ಲಾಕಪ್ಪದಲ್ಲಿ ತುಂಬಿ ಬಿಡು ತ್ತಿದ್ದರು. ನಡುವೆ ಮಲಮೂತ್ರ ವಿಸರ್ಜನೆ ಮಾಡುವದಾದರೆ ಅಲ್ಲಿಯೇ ಲಾಕಪ್ಪ ದಲ್ಲಿದ್ದ ಬಹಿರಂಗ ಬಚ್ಚಲ ಮೂಲೆಯಲ್ಲಿ ಎಲ್ಲರ ಎದುರು ಮಾಡಬೇಕಾಗುತ್ತಿತ್ತು. ಊಟದ ಬಗ್ಗೆಯಂತೂ ಹೇಳುವ ಕಾರಣವೇ ಇದ್ದಿಲ್ಲ. ಹಾಸಲಿಕ್ಕಿಲ್ಲ ಹೊದಿಯಲಿಕ್ಕಿಲ್ಲ ಇಂಥ ಸ್ಥಿತಿಯಲ್ಲಿ ತಿಂಗಳು ಗಟ್ಟಲೆ ಕಾರ್ಯಕರ್ತರು ಕೊಳೆಯಬೇಕಾಯಿತು.

ಮೊದಲು ಪೋಲೀಸರಿಂದ ಬಡೆತದ ಪ್ರಸಾದ ತಿಂದು ಲಾಕಪ್ಪಿನ ಯಮಸದ ನಕ್ಕೆ ಬರಬೇಕು. ಮುಂದೆ ಅಲ್ಲಿ ತಿಂಗಳುಗಟ್ಟಲೆ ನಿಂತು ನರಕಸದೃಶ ಕಚ್ಚಾ ಜೇಲು ಗಳಿಗೆ ಹೋಗಬೇಕು. ಬೆಳಗಾವಿಯಲ್ಲಿ ಹೆಡ್‌ಕ್ವಾರ್ಟರ ಜೇಲ (ಈಗಿನ ಗೋಡಾನ) ಕಿಲ್ಲೆಯ ಕ್ಯಾಂಪ ಜೇಲುಗಳನ್ನು ಪ್ರವೇಶಿಸಿದವರು ನಿಜವಾಗಿಯೇ ನರಕಯಾತನೆ

ಭೋಗಿಸಿದರೆಂದು ಹೇಳಬೇಕು. ದನ, ಕುರಿ, ಕುದುರೆ ಕಟ್ಟುವ ಸ್ಥಳವೂ ಅದಕ್ಕಿಂತ ಸ್ವಚ್ಛ ಇರಬಹುದು. ಹೊಲಸು ಸ್ಥಳ, ದುರ್ಗಂಧ, ನೀರಿನ ಅಭಾವ, ತಗಣಿ ಗುಂಗಾಡು ಚಿಕ್ಕಾಡು ಕೂರಿಗಳ ಕಡಿತ, ಕಟ್ಟಾ ಹಸಿಬಿಸಿ ರೊಟ್ಟಿಯ ಊಟ, ಇವೆಲ್ಲವುಗಳನ್ನು ನೆನಸಿದರೆ ಹಿಂಡಲಗಿಯ ಜೇಲು ಸ್ವರ್ಗವೆಂದೇ ಹೇಳಬೇಕು. ಈ ಕ್ಯಾಂಪ ಜೇಲುಗಳಲ್ಲಿ ಲಾಕಪ್ಪುಗಳಲ್ಲಿ ಬಹಳ ದಿನ ಕೊಳೆತವರು ನಿಜವಾದ ಕಷ್ಟಪಟ್ಟವರೆಂದು ನಿಸ್ಸಂದಿಗ್ಧವಾಗಿ ಹೇಳಬಹುದು.

ಕೆಲವು ಅಪವಾದಗಳು.

ಶ್ರೀ ಆರೂರ ಎಂಬವರು ಖಾನಾಪೂರ ತಾಲೂಕಿಗೆ ಫೌಜದಾರರಾಗಿದ್ದಾಗ ಶ್ರೀರಂಗ ಕಾಮತರು ಖಾನಾಪುರದಲ್ಲಿ ಒರ್ವ ಮಿತ್ರರ ಮನೆಯಲ್ಲಿ ತಂಗಿದ್ದರು. ಶ್ರೀ ಆರೂರ ಅವರಿಗೆ ಅದು ಗೊತ್ತಿತ್ತು. ಅವರು ಒಂದು ರಾತ್ರಿ ಅಲ್ಲಿಗೆ ಬಂದು, " ನಾಳೆ ಇಲ್ಲಿ ಮಿಲಟರಿ ಸಹಾಯದಿಂದ ಪೋಲೀಸರ ಮುತ್ತಿಗೆ ಬರುವದಿದೆ. ಕಾರಣ ನೀವು ಮುಂಜಾನೆ ಈ ಊರುಬಿಟ್ಟು ಬೇರೆ ಕಡೆಗೆ ಹೋಗುವದು ಒಳಿತು " ಎಂದು ಸೂಚನೆ ಕೊಟ್ಟರು.

ಗೋಕಾಕದಲ್ಲಿ ಶ್ರೀ ಮುಲ್ಲಾ ಎಂಬ ಹೆಸರಿನ ಫೌಜದಾರರಿದ್ದರು. ಅವರು ಯಾವರೀತಿಯಿಂದಲೂ ನಮ್ಮ ಕಾರ್ಯಕರ್ತರಿಗೆ ಸಹಾಯಮಾಡದೆ ಸರಕಾರಕ್ಕೆ ಅತ್ಯಂತ ನಿಷ್ಠರಾಗಿ ಕೆಲಸಮಾಡಿದರು. ಆದರೆ ಬಂಧನ ಪೂರ್ವದಲ್ಲಿಯಾಗಲಿ ನಂತರವಾಗಲಿ ಎಂದೂ ಯಾವದೇ ಕಾರ್ಯಕರ್ತನಿಗೆ ಅಥವಾ ಅವರ ಮನೆಯವರಿಗೆ ಒಂದು ಅವಾಚ್ಯರದಿಂದಲೂ ಬೈಯಲಿಲ್ಲ. ಪ್ರಸಂಗೋಪಾತ್ ನಮ್ಮ ತ್ಯಾಗದ ಕೆಲ್ತಸದ ಪ್ರಶಂಸೆ ಮಾಡುತ್ತಿದ್ದರು. ಹುದ್ದಿ ಭಾಗದಲ್ಲಿ ಮಾತ್ರ ಇವರು ಕಾರ್ಯಕರ್ತರಿಗೆ ಚಿತ್ರಹಿಂಸೆಕೊಟ್ಟರು.

ಕಿತ್ತೂರ ಠಾಣ್ಯದ ಫೌಜದಾರರಾದ ಶ್ರೀ ಮುತ್ಸದ್ದಿ ಅವರು ಚಳುವಳಿಗೆ ಸಹಾನುಭೂತಿವುಳ್ಳವರಾಗಿದ್ದರು. ಅವರು ಯಾವ ಬಂಧಿತನನ್ನೂ ಹೊಡದು ಬಡೆದು ಮಾಡಲಿಲ್ಲ. ಬಾಯಿಂದ ಅವಾಚ್ಯ ಶಬ್ದವನ್ನೂ ಯಾವ ಸಂದರ್ಭದಲ್ಲಿಯೂ ಉಚ್ಚರಿಸಲಿಲ್ಲ. ಎಲ್ಲ ಪೋಲೀಸ ಅಧಿಕಾರಿಗಳಂತೆ ಜಪ್ತಿ ರುಜುತಿ ನಡೆಸುತ್ತಿದ್ದರು. ಆದರೆ ಯಾರಿಗೂ ಅಪಶಬ್ದ ಮಾತಾಡುತ್ತಿದ್ದಿಲ್ಲ. ಇಡೀ ಊರಿಗೆ ಮುತ್ತಿಗೆ ಹಾಕಿ ಇಂಗ್ಲೀಷ ಮೇಲಧಿಕಾರಿಗಳಗೂಡ ಹೋರಾಟಗಾರರ ಶೋಧ ಮಾಡುವಾಗ ಕೈಯಲ್ಲಿಯ ಯಾದಿಯಂತೆ ಸಾಹೇಬನು ಭೂಗತರ ಹೆಸರು ಕೇಳುತ್ತ ನಡೆದಾಗ ಒಮ್ಮೊಮ್ಮೆ ಪರಿಚತ ಭೂಗತನನ್ನು ಕಂಡರೂ ಅವನನ್ನು ಗುರುತಿಸಲಿಲ್ಲೆಂಬಂತೆ ಶ್ರೀ ಮುತ್ಸದ್ದಿಯವರು ನಟಿಸಿ ಬಿಟ್ಟು ಬಿಟ್ಟದ್ದೂ ಉಂಟು. ಚಳುವಳಿಗಾರರತ್ತ ಅವರ ಒಲವು ಇದ್ದದ್ದನ್ನು ಕಂಡು ಅವರಿಗೆ ಹಿಂಬಡತಿಕೊಟ್ಟು ಜಮಾದಾರರನ್ನಾಗಿ ಮಾಡಿ ಕ್ಯಾಸಲರಾಕಕ್ಕೆ ಹಾಕಿದ್ದರು. ಮುಂದೆ ೧೯೪೬ ರಲ್ಲಿ ಕಾಂಗ್ರೇಸ ಮಂತ್ರಿಮಂಡಳ ಬಂದಾಗ ಕಿತ್ತೂರ ಭಾಗದ ಕಾರ್ಯಕರ್ತರು ಅವರಬಗ್ಗೆ ಮಂತ್ರಿಗಳಿಗೆ ಹೇಳಿದಾಗ ಅವರಿಗೆ ಬಡತಿಕೊಟ್ಟು ಸಿ. ಆಯ್. ಡಿ. ಇನ್‌ಸ್ಪೆಕ್ಟರ ಮಾಡಲಾಯಿತು.

ಶ್ರೀ ವಾಮನರಾವ ಬಿದರಿ ಮತ್ತು ಶ್ರೀರಂಗ ಕಾಮತರು ರೇಲಿನಿಂದ ಪ್ರವಾಸ ಮಾಡುತ್ತಿದ್ದಾಗ ಗದುಗಿನ ರೇಲ್ವೆ ಸ್ಟೇಶನ್ನಿನಲ್ಲಿ ಪೋಲಿಸ ಇನಸ್ಪೆಕ್ಟರ ಶ್ರೀ ಜೈನಾಪುರರು ಅವರನ್ನು ನೋಡಿದರು. ಇನ್ನೇನು ಕೆಲಸ ಬಗೆಹರಿಯಿತು, ಬಂಧನವಾಗುವದು ನಿಶ್ಚಿತವೆಂದು ಇವರು ತಿಳಿದರು. ಆದರೆ ಶ್ರೀ ಜೈನಾಪುರ ಅವರು ಇವರನ್ನು ನೋಡಿಯೂ ನೋಡದಂತೆ ನಟಿಸಿ ಆಚೆಗೆ ಹೋದರು. ಬೆಳಗಾವಿಯ ಡಾ. ಟಿ. ಜಿ. ಜೋಶಿಯವರ ದವಾಖಾನೆಯಲ್ಲಿ ಕಣ್ಣಿನ ಉಪಚಾರಕ್ಕಾಗಿ ಶ್ರೀ ಜೈನಾಪುರರು ಹೋದಾಗ ಅಕಸ್ಮಾತ್ತಾಗಿ ಶ್ರೀ ವಡವಿ ಮಾಸ್ತರರು ಅಲ್ಲಿ ಬಂದರು. ಆಗ ಕಣ್ಣಲ್ಲಿ ಔಷಧ ಹಾಕಿಸಿಕೊಂಡು ಏನೂಕಾಣದವರಂತೆ ಜೈನಾಪುರರು ನಟಿಸಿದರು. ಕಲವು ಪೋಲೀಸ ಕಾನಸ್ಟೇಬಲ್ಲರು ಸಹ ಆಗಾಗ ನಮ್ಮೊಂದಿಗೆ ಸಹಾನುಭೂತಿಯಿಂದ ನಡೆದು ತುಸು ತುಸು ಮಾಹಿತಿ ಕೊಡುತ್ತಿದ್ದರು. ಶ್ರೀರಂಗ ಕಾಮತ ಮತ್ತು ಜಯದೇವ ಕಂಲಕರ್ಣಿಯವರ ಬಂಧನವಾಗುವ ಪೂರ್ವದಲ್ಲಿ ಶ್ರೀ ಮುತಾಲೀಕ ಬಾಪು ಎಂಬ ಪೋಲೀಸರು ಶ್ರೀ ನಾನಾ ಜೋಶಿಯವರ ಮುಖಾಂತರ ಅರ್ಧಘಂಟೆ ಮೊದಲು ಸುದ್ದಿ ಹೇಳಿ ಕಳಿಸಿದ್ದರು.

ಶ್ರೀ ಅಮೀರ ದೇಸಾಯಿ (ಆಕ್ಕತಂಗೇರಹಾಳ) ಎಂಬ ಹವಾಲದಾರರು ಗುಜನಾಳ ಪೋಲೀಸ ಡಿ. ವಾಯ್. ಎಸ್. ಪಿ. ದಲದಲ್ಲಿದ್ದರು. ಅವರು ಆಗಾಗ ಕೆಲ ಸಂಗತಿಗಳ ಸುಳಿವು ನಮ್ಮ ಕಾರ್ಯಕರ್ತರಿಗೆ ಕೊಡುತ್ತಿದ್ದರು.

ಶ್ರೀ ಪಿ, ಎಂ. ಲಾಡ ಎಂಬವರು ಆಗ ಜಿಲ್ಹೆಯ ಸೆಶನ್ಸ ಹಾಗೂ ಡಿಸ್ಟ್ರಿಕ್ಟ ಜಜ್ಜರಾಗಿದ್ದರು. ಶ್ರೀ ಪೋನಾನಿ ಎಂಬವರು ಅ. ಜಜ್ಜರಾಗಿದ್ದರು ಇವರಿಬ್ಬರೂ ರಾಜಕೀಯ ಖಟ್ಲೆಗಳಲ್ಲಿ ಆರೋಪಿಗಳೊಂದಿಗೆ ಬಹಳ ಸಹಾನುಭೂತಿಯಿಂದ ನಡೆದು ಕೊಂಡರು. ತಮ್ಮ ಮುಂದೆ ಬಂದ ಖಟ್ಲೆಗಳಲ್ಲಿ ನೂರಕ್ಕೆ ೯೫ ರಷ್ಟು ಖಟ್ಲೆಗಳನ್ನು ಅವರು ಬಿಟ್ಟು ಬಿಟ್ಟರು.

ಧಾರವಾಡದ ಜೇಲರ ಶ್ರೀ ದಾಡೆ

ಧಾರವಾಡದ ಜೇಲಿನಲ್ಲಿ ಧಾರವಾಡ ಮತ್ತು ಬೆಳಗಾವಿ ಜೆಲ್ಹೆಯ ಆಂಡರ ಟ್ರಾಯಲ ಕೈದಿಗಳನ್ನು ಇಟ್ಟಿದ್ದರು. ೧೯೪೩ ರ ಕೊನೆಗೆ ಆ ಜೇಲಿನಲ್ಲಿ ಸುಮಾರು ೮–೯ ನೂರು ಜನ ಚಳುವಳಿಗಾರರು ಇದ್ದರು. ಎಲ್ಲರೂ ಆಂಡರ ಟ್ರಾಯಲ ದವರೇ. ಶಿಕ್ಷೆಯಾದನಂತರ ಹಿಂಡಲಗಿಗೆ ಕಳಿಸುತ್ತಿದ್ದರು. ಖಟ್ಲೆಗಳು ಬೇಗ ಮುಗಿಯುತ್ತಿದ್ದಿಲ್ಲ. ಒಬ್ಬೊಬ್ಬರಮೇಲೆ ಹತ್ತರಿಂದ ಇಪ್ಪತ್ತೈದು ಖಟ್ಲೆಗಳಿದ್ದವು. ಆದ್ದರಿಂದ ೭–೮ ತಿಂಗಳವರೆಗೆ ಆಂಡರ ಟ್ರಾಯಲ್ ಎಂದು ಉಳಿಯಬೇಕಾಗುತ್ತಿತ್ತು.